<u>ಸಾಕ್ಷಿಯನ್ನು ದಿಃ **06.04.2022** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ವಾದಿಗಳ ಪರ ಶ್ರೀಮತಿ ಎಂ ಎಂ ವಕೀಲರಿಂದಃ</u>**

ವಾದಿಗಳಿಗೆ ಹಾಗೂ 1 ರಿಂದ 13 ನೇ ಪ್ರತಿವಾದಿಗಳಿಗೆ ಸರ್ವೆ ನಂ.112/2 ರ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ. ಗೊಲ್ಲಳ್ಳಿ ಈರಜ್ಜನಿಗೆ ಸರ್ವೆ ನಂ.112/2 ರ ಜಮೀನು ಇತ್ತು. ಆ ಸರ್ವೆ ನಂಬರಿನಲ್ಲಿ ವಾದಿಗಳಿಗೆ ಯಾವುದೇ ಭಾಗ ಹೋಗಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸರ್ವೆ ನಂ112/2 ರ ಸ್ವತ್ತಿನ ಬಗ್ಗೆ ನಾನು ಹೇಳಿಲ್ಲ. ಮೂಲತಃ ಯರದಕಟ್ಟೆಯ ಸರ್ವೆ ನಂ.11/1 ರಲ್ಲಿನ 7 ಎಕರೆ 5 ಗುಂಟೆ ಜಮೀನು ಕೊರಮಜ್ಜನಿಗೆ ಬಂದಿತ್ತು. ಈಗ ಆಸರ್ವೆ ನಂಬರಿನಲ್ಲಿ 6 ಎಕರೆ 36 ಗುಂಟೆ ಜಮೀನು ಇದೆ. ಅದರಲ್ಲಿನಎಷ್ಟು ವಿಸ್ತೀರ್ಣದ ಜಮೀನನ್ನು 14 ಮತ್ತು 15 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸಂಪೂರ್ಣ ಜಮೀನನ್ನು ಮಾರಾಟ ಮಾಡಿದ್ದೇವೆ ಎಂದು ಉತ್ತರಿಸುತ್ತಾರೆ.

ಆ ಜಮೀನನ್ನು **1** ನೇ ಪ್ರತಿವಾದಿ ಮಾರಾಟ ಮಾಡಿದ್ದು, ನಾವು ಮಾರಾಟ ಮಾಡಿಲ್ಲ. ನಿಡಿ-**24** ರ ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರು ಇಲ್ಲ. ನಿಡಿ.**24** ರಪ್ರಕಾರ ಸರ್ವೆ ನಂ.**11/5** ರಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ **1** ಎಕರೆ, **36** ಗುಂಟೆ ಜಮೀನು ಇದೆ ಎಂದು ಉತ್ತರಿಸುತ್ತಾರೆ. ಆ ಜಮೀನು ನಿಮಗೆ ಹೇಗೆ ಬಂದಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಮೃತ್ಯು ಪತ್ರದ ಪ್ರಕಾರ ಬಂದಿದೆ ಎಂದು ಉತ್ತರಿಸುತ್ತಾರೆ ಮೃತ್ಯು ಪತ್ರದ ಪ್ರಕಾರ ನಾವು ನಮ್ಮ ಹೆಸರಿಗೆ ಖಾತ ಮಾಡಿಸಿಕೊಂಡಿದ್ದೇವೆ. ಆ ರೀತಿ ನಾವು ಖಾತೆಯನ್ನು ಯಾವ ಇಸವಿಯಲ್ಲಿ ಮಾಡಿಸಿಕೊಂಡಿದ್ದೇವೆ ಎನ್ನುವುದು ನನಗೆ ಗೊತ್ತಿಲ್ಲ. ನಾವು **2018** ರಲ್ಲಿ ಖಾತೆ

ಮಾಡಿಸಿಕೊಂಡಿದ್ದೇವೆ ಎಂದರೆ ಸರಿ.

ನಿಡಿ-24 ರಲ್ಲಿ ನಮೂದಿಸಿದ 1 ಎಕರೆ 35 ಗುಂಟೆ ಜಮೀನು ದಾವಾ ಐಟಂ ನಂ.1 ರ ಭಾಗ ಎಂದರೆ ಸರಿ . ವಿಭಜನೆಯ ಮೇರೆಗೆ ನಮ್ಮ ಹೆಸರು ನಿಡಿ-24 ರಲ್ಲಿ ದಾಖಲಾಗಿದೆ ಎಂದು ನಮೂದು ಇದೆ ಎಂದರೆ ಸರಿ. ಸರ್ವೆ ನಂ.11/1 ರಲ್ಲಿನ 4 ಎಕರೆ ಜಮೀನನ್ನು ನಾವು ಹಾಗೂ 1 ನೇ ಪ್ರತಿವಾದಿ ಸೇರಿ 14 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ.4 ರ ಪ್ರಕಾರ ದಾವಾ ಐಟಂ ನಂ.1 ರಲ್ಲಿನ 1 ಎಕರೆ ಜಮೀನನ್ನು ನಾವು ಹಾಗೂ 1 ನೇ ಪ್ರತಿವಾದಿ ಸೇರಿ 15 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ.

ನಿಪಿ.2 ರ ಮೃತ್ಯು ಪತ್ರವನ್ನು ಹೊರತು ಪಡಿಸಿ ಕೊರಮಪ್ಪ ಬಿನ್ ಗೊಲ್ಲಳ್ಳಿ ಈರಜ್ಜ ಬೇರೆ ಯಾವುದೇ ಮೃತ್ಯು ಪತ್ರವನ್ನು ಮಾಡಿಲ್ಲ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ . ಕೊರಮಪ್ಪನವರು ತಮ್ಮ ಜೀವಿತಾವಧಿಯಲ್ಲಿ ಅಂದರೆ 1980 ರವರೆಗೆ ನಿಪಿ.2 ರಲ್ಲಿ ಹೇಳಿದ ಸ್ವತ್ತಿನ ಸ್ವಾಧೀನತೆಯಲ್ಲಿ ಇದ್ದರು, ತದ ನಂತರ ಈ . ಪಲ್ಲೆಕಪ್ಪ ಆ ಸ್ವತ್ತಿನ ಸ್ವಾಧೀನತೆಯಲ್ಲಿ ಇದ್ದು ಅವರ ನಂತರ ವಾದಿಗಳು ಆ ಸ್ವತ್ತಿನ ಸ್ವಾಧೀನತೆಯಲ್ಲಿ ಇದ್ದಾರೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ದಾವಾ ಐಟಂ ನಂ.1ರ ಪೂರ್ವಕ್ಕೆ ಎನ್ ಹೆಚ್-4, ಪಶ್ಚಿಮಕ್ಕೆ ಗುಂಡಜ್ಜ ಹಾಗೂ ಬೀರಮ್ಮನವರ ಜಮೀನು, ಉತ್ತರಕ್ಕೆ ಕರಿಯಪ್ಪನ ಜಮೀನು ಹಾಗೂ ದಕ್ಷಿಣಕ್ಕೆ ಈರಜ್ಜನ ಜಮೀನು ಇದೆ . ದಾವಾ ಐಟಂ ನಂ.1 ರ ಪೂರ್ವಕ್ಕೆ ಇರುವ ರಾ.ಹೆದ್ದಾರಿ ಅದೇ ಸರ್ವೆ ನಂಬರಿನ 10 ಗುಂಟೆ ಜಮೀನು ಎಂದರೆ ಸರಿ. 1984 ರಲ್ಲಿ ರಾ.ಹೆದ್ದಾರಿಗೆ ಭೂಸ್ವಾಧೀನ ಪಡಿಸಿಕೊಂಡಾಗ ಪರಿಹಾರದ ಹಣವನ್ನು ಈ.ಪಲ್ಲೆಕಪ್ಪನವರೇ ಪಡೆದುಕೊಂಡಿದ್ದಾರೆ ಎಂದರೆ

ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಪರಿಹಾರದ ಹಣವನ್ನು 1 ನೇ ಪ್ರತಿವಾದಿ ಪಡೆದುಕೊಂಡಿದ್ದಾರೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಪಡಿಸಿಲ್ಲ. ಕೊರಮಪ್ಪನ ಹೆಂಡತಿ ಕರಿಯಮ್ಮ ತನ್ನ ಜೀವಿತಾವಧಿಯಲ್ಲಿ ಪಲ್ಲೆಕಪ್ಪನ ಆಶ್ರಯದಲ್ಲಿ ಇದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರಜೊತೆ ದಾವಾ ಐಟಂ ನಂ.2 ರ ಸ್ವತ್ತನ್ನೂ ಸಹ ಪಲ್ಲೆಕಪ್ಪ ಕರಿಯಮ್ಮನ ಜೀವಿತಾವಧಿಯಲ್ಲಿ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ಕರಿಯಮ್ಮನ ನಿಧನಾ ನಂತರ ವಾದಿಗಳು ಹಾಗೂ 1 ರಿಂದ 13 ನೇ ಪ್ರತಿವಾದಿಗಳಾದ ನಾವು ಆ ಸ್ವತ್ತಿನ ಜಂಟೀ ಸ್ವಾಧೀನತೆಯಲ್ಲಿ ಇದ್ದು ಅದನ್ನು ಅನುಭವಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಕೊರಮಪ್ಪ ಹಾಗೂ ಕರಿಯಮ್ಮನ ಹೆಸರಿನಲ್ಲಿ ಇದ್ದಮನೆ ನಮ್ಮೆಲ್ಲರ ಜಂಟೀ ಸ್ವಾಧೀನತೆಯಲ್ಲಿ ಇದೆ ಎಂದರೆ ಸರಿಯಲ್ಲ. ಆ ಮನೆಯ ಖಾತೆ ನಂಬರ್ 38/60 ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.